1229 ಶ್ರೀ ಗೋಪಾಲ ಭಂಡಾರಿ ಹೆಚ್ (ಕಾರ್ಕಳ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಈ ಹಿಂದೆ ಎಲ್ಲಾ ಪಡಿತರ ಚೀಟಿ ಹೊಂದಿದವರಿಗೆ ಸೀಮೆ ಎಣ್ಣೆ ವಿತರಿಸಲಾಗುತ್ತಿದ್ದು, ಇತ್ತೀಚೆಗೆ ವಿತರಿಸದಿರಲು ಕಾರಣವೇನು;

ಆ) ಇನ್ನು ಮುಂದೆ ಎಲ್ಲಾ ಪಡಿತರ ಚೀಟಿ ಹೊಂದಿದವರಿಗೂ ಸೀಮೆಎಣ್ಣೆ ವಿತರಿಸಲಾಗುವುದೇ;

ಇ) ಪಡಿತರ ಚೀಟಿಗಾಗಿ ಅರ್ಜಿ ಸಲ್ಲಿಸಲು ಅನುಸರಿಸಬೇಕಾದ ವಿಧಾನಗಳು ಯಾವುವು?

ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ಈ ಹಿಂದೆ ಎಲ್ಲಾ ಅನಿಲ ರಹಿತ ಪಡಿತರ ಚೀಟಿದಾರರಿಗೆ ಮಾತ್ರ ಸೀಮೆಎಣ್ಣೆ ವಿತರಿಸಲಾಗುತ್ತಿದ್ದು, ಈಗಲೂ ಅದೇ ಪದ್ಧತಿ ಜಾರಿಯಲ್ಲಿರುತ್ತದೆ.

ಆ) ಅನಿಲ ರಹಿತ ಪಡಿತರ ಚೀಟದಾರರಿಗೆ ಮಾತ್ರ ಸೀಮೆಎಣ್ಣೆಯನ್ನು ವಿತರಿಸಲಾಗುವುದು.

ಇ) ಪಡಿತರ ಚೀಟಿಗಳನ್ನು ಪಡೆಯುವ ವಿಧಾನ ಮತ್ತು ಒದಗಿಸಬೇಕಾದ ದಾಖಲೆಗಳು:

1) ಕರ್ನಾಟಕ ರಾಜ್ಯದಲ್ಲಿ ವಾಸಿಸುತ್ತಿರುವ ಪ್ರತಿಯೊಂದು ಕುಟುಂಬವು ಅವರಿಗೆ ಅನ್ವಯಿಸುವ ಒಂದು ಪಡಿತರ ಚೀಟಿಯನ್ನು ಮಾತ್ರ ಪಡೆಯಲು ಅರ್ಹತೆ ಹೊಂದಿರುತ್ತದೆ.

2) ಗಣಕೀಕೃತ ಪಡಿತರ ಚೀಟಿ ಪಡೆಯಲು ಅರ್ಜಿ ನಮೂನೆಗಳನ್ನು ಸಂಬಂಧಪಟ್ಟ ಕಛೇರಿಗಳಲ್ಲಿ ನಿಗದಿತ ಶುಲ್ಕ ಪಾವತಿಸಿ ಪಡೆಯ ಬಹುದಾಗಿರುತ್ತದೆ.

3) ಬೆಂಗಳೂರು ಅನೌಪಚಾರಿಕ ಪಡಿತರ ಪ್ರದೇಶಗಳಿಗೆ ಸಂಬಂಧಿಸಿದಂತೆ ವಲಯಗಳ ಉಪನಿರ್ದೇಶಕ, ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆರವರಲ್ಲಿ ಅರ್ಜಿ ಸಲ್ಲಿಸಬಹುದು.

4) ಜಿಲ್ಲಾ ವ್ಯಾಪ್ತಿಯ ಅನೌಪಚಾರಿಕ ಪಡಿತರ ಪ್ರದೇಶಗಳಲ್ಲಿ ಅರ್ಜಿಗಳನ್ನು ಸಂಬಂಧಪಟ್ಟ ಉಪ/ಸಹಾಯಕ ನಿರ್ದೇಶಕರು,ಅ.ನಾ.ಸ. ಇಲಾಖೆ ಅಥವಾ ಸಂಬಂಧಪಟ್ಟ ತಹಶೀಲ್ದಾರ್‌ರವರಿಗೆ ಸಲ್ಲಿಸಬಹುದು.

5) ಗ್ರಾಮಾಂತರ ಪ್ರದೇಶಗಳಿಗೆ ಸಂಬಂಧಿಸಿದ ಅರ್ಜಿಗಳನ್ನು ಸಂಬಂಧಿಸಿದ ಆಯಾ ತಾಲ್ಲೂಕುಗಳ ತಹಶೀಲ್ದಾರ್ ರವರಿಗೆ ಸಲ್ಲಿಸಬಹುದು.

6) ಬೇರೆ ಕಾರ್ಡಿನಿಂದ ಹೆಸರನ್ನು ತೆಗೆದ ದೃಢೀಕರಣ ಪತ್ರ, (Deletion Certificate) ವಿವಾಹ ದೃಢೀಕರಣ ಪತ್ರ, ಜನನ ಪ್ರಮಾಣ ಪತ್ರ (Birth certificate), ಮರಣ ಪ್ರಮಾಣ ಪತ್ರ (Death Certificate), ಕಾರ್ಡು ಹಿಂದಿರುಗಿಸಿದ ಅಧ್ಯರ್ಪಣ ಪತ್ರ (Surrender Certificate)ಗಳು ಒದಗಿಸಬಹುದಾದ ಅಗತ್ಯ ದಾಖಲೆಗಳು.

7) ಮಧ್ಯವರ್ತಿಗಳ ಮೂಲಕ ಸಲ್ಲಿಸುವ ಅರ್ಜಿಗಳನ್ನು ಪುರಸ್ಕರಿಸ ಲಾಗುವುದಿಲ್ಲ.

8) ವಾಸ ಸ್ಥಳದ ಪುರಾವೆಗಾಗಿ ಈ ಕೆಳಕಂಡ ದಾಖಲೆಗಳಲ್ಲಿ ಒಂದನ್ನುಒದಗಿಸಬಹುದು.

ಅ) ಟೆಲಿಫೋನ್ ಬಿಲ್

ಆ) ಎಲ್‌ಪಿಜಿ ರಶೀದಿ

ಇ) ಡ್ರೈವಿಂಗ್ ಲೈಸನ್ಸ್

ಈ) ಪಾಸ್ ಪೋರ್ಟ್

ಉ) ಸ್ವೀಕೃತಿಯಾದ ಅಂಚೆ ಪತ್ರ

ಊ) ಸರ್ಕಾರಿ/ಸಾರ್ವಜನಿಕ ಉದ್ಯಮ ವಲಯಗಳು ನೀಡಿರುವ ಗುರುತಿನ ಚೀಟಿ

ಎ) ಸ್ವಂತ ಮನೆಯ ತೆರಿಗೆ ಸಂದಾಯ ರಶೀದಿ

ಏ) ಮತದಾರ ಪಟ್ಟಿಯ ಹೆಸರಿನ ದಾಖಲೆ

ಐ) ಬಾಡಿಗೆ ಕರಾರು ಪತ್ರ

ಒ) ವಾಸ ಸ್ಥಳವನ್ನು ಸಾಬೀತು ಪಡಿಸಬಹುದಾದ ಇತರೆ ಯಾವುದೇ ದಸ್ತಾವೇಜು

9) ನಿಗದಿತ ನಮೂನೆಯ ಅರ್ಜಿ ಹಾಗೂ ಸೂಕ್ತ ದಾಖಲಾತಿಗಳನ್ನು ಪರಿಶೀಲಿಸಿ ಆಹಾರ ನಿರೀಕ್ಷಕರು ಸ್ಥಳ ತನಿಖೆ ಮಾಡಿ ಅರ್ಹತೆಯನ್ನು ಪರಿಶೀಲಿಸಿ ವರದಿ ಸಲ್ಲಿಸಿರುತ್ತಾರೆ.